<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **16/2025** ಸಿ. ಡಬ್ಲ್ಯೂಃ **8** ಪಿ ಡಬ್ಲ್ಯೂ ಃ **2**</u>

ಸಾಕ್ಷಿಯ ಹೆಸರು ಃ ರಿಜರ್ಡ ಪಂಗಳೆರ

ತಂದೆಯ ಹೆಸರು ಃ ಜಾನ್

ವಯಸ್ಸು ಃ 62 ವರ್ಷ

ಉದ್ಯೋಗ ಃ ನಿವೃತ್ತ ಎ ಎಸ್ ಐ.

ವಾಸಸ್ಥಳ ಃ ಹುಬ್ಬಳ್ಳಿ.

ದಿನಾಂಕಃ 10-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. 2020 ರಿಂದ 2024 ರ ವರೆಗೆ ಕುಂದಗೋಳ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕೆಲಸ ಮಾಡಿದ್ದೇನೆ. ದಿಃ 28-11-2021 ರಂದು ರಾಃ 8.15 ಗಂಟೆಗೆ ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಚಾಸಾ 1 ಅವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರು, ಪಂಚನಾಮೆ, ಆರೋಪಿ ಹಾಗೂ ಮುದ್ದೆ ಮಾಲುಗಳನ್ನು ತಂದು ನನ್ನ ಮುಂದೆ ಹಾಜರು ಪಡಿಸಿದ್ದು ಸದರಿ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 146/2021 ರಂತೆ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ಘನ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯನ್ನು ರಿಮಾಂಡ ಅರ್ಜಿಯೊಂದಿಗೆ ನ್ಯಾಯಾಯಕ್ಕೆ ಹಾಜರುಪಡಿಸಿ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 4 ಮತ್ತು 5 ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 25-12-2021 ರಂದು ಜಪ್ತಾದ ಮಾಲುಗಳನ್ನು ಕೋರಿಕಾ ಪತ್ರದೊಂದಿಗೆ ಚಾಸಾ 6 ಅವರ ಬಳಿ ಎಫ್ ಎಸ್ ಎಲ್ ಗೆ ಕಳುಹಿಸಿದ್ದು ಅವರಿಂದ ಸ್ವೀಕೃತಿ ಪಡೆದು ಅವರ ಹೇಳಿಕೆ ಪಡೆದಿರುತ್ತೇನೆ. ದಿಃ 08-06-2022 ರಂದು ಎಫ್ ಎಸ್ ಎಲ್ ವರದಿಯನ್ನು ಪಡೆದು ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದಲ್ಲಿ ಗೈರು ಹಾಜರು ಇದ್ದು ಆತನ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದಾರೆ .

2. ದೂರನ್ನು ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಪ್ರ. ವ. ವ ಯನ್ನು ನಿಪಿ.4, ಸಾಕ್ಷಿಯ ಸಹಿಯನ್ನು 4 ಎ ಎಂದು ಗುರುತಿಸಲಾಯಿತು . ಕೋರಿಕಾ ಪತ್ರ ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು. ಎಫ್ ಎಸ್ ಎಲ್ ವರದಿಯನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು. ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆ ಮಾಲುಗಳನ್ನು ಈಗಾಗಲೇ ಎಮ್ ಓ 1 ಎಂದು ಗುರುತಿಸಲಾಗಿದೆ.

ಪಾಟೀಸವಾಲು ಃ ಆರೋಪಿ ಪರ ಶ್ರೀ ಎಂ ಬಿ ಬಿ ವಕೀಲರಿಂದ

3. ಚಾಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ . ಚಾಸಾ-4 ಮತ್ತು 5 ನನ್ನ ಇಲಾಖಾ ಸಿಬ್ಬಂದಿ ಎಂದರೆ ಸರಿ . ಅವರ ಆದೇಶದ ಪ್ರಕಾರ ನಾನು ಕೆಲಸ ಮಾಡುತ್ತೇನೆ ಎಂದರೆ ಸರಿ. ಪ್ರತಿ ತಿಂಗಳು ಇಂತಿಷ್ಟು ಕೇಸಗಳನ್ನು ದಾಖಲು ಮಾಡಬೇಕೆಂದು ಮೇಲಾಧಿಕಾರಿಗಳಿಂದ ನಿರ್ದೇಶನ ಇರುತ್ತದೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಾದ ನಂತರ ನೀವು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟು ಪರೀಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಚಾಸಾ 4 ರಿಂದ 6 ನಮ್ಮ ಇಲಾಖಾ ಸಿಬ್ಬಂದಿಗಳು ಎಂದರೆ ಸರಿ. ಟೆಟ್ರಾ ಪ್ಯಾಕೆಟಗಳು ಎಲ್ಲ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಮುದ್ದೆ ಮಾಲುಗಳನ್ನು ಎಫ್ ಎಸ್ ಎಲ್ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ . ಆರೋಪಿತರಿಗೂ ಎಂ ಓ-1 ಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ಧ ಸುಳ್ಳು ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ